## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 54/2017**

**ಪಿ ಡಬ್ಲ್ಯೂ -09**

**ಸಿ ಡಬ್ಲ್ಯೂ-08**

**ದಿಃ 01.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಬಿ. ಕೋಮಲೇಶಯ್ಯ**
**ತಂದೆಯ ಹೆಸರು ಃ ಲೇಟ್ ಬೆಟ್ಟಯ್ಯ**
**ವಯಸ್ಸು ಃ 66 ವರ್ಷ**
**ಉದ್ಯೋಗ ಃ ನಿವೃತ್ತ ಎ.ಎಸ್.ಐ**
**ವಿಳಾಸ ಃ ನೆಲಮಂಗಲ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ನಾನು 2015 ರಿಂದ 2018 ರವರೆಗೂ ನಾನು ದೊಡ್ಡಬೆಳವಂಗಲ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18.07.2016 ರಂದು ನಾನು ಠಾಣಾ ಪ್ರಭಾರದಲ್ಲಿರುವಾಗ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂ. 118/2016 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು ಹಾಗೂ ಪ್ರತಿಯನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಪ್ರ.ವ.ವರದಿಯನ್ನು ನಿಪಿ-9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-2, 3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 12-30 ರಿಂದ 1-30 ಗಂಟೆ ಸಮಯದವರೆಗೂ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ

ಪ್ರಕರಣದ ಕಡತವನ್ನು ಚಾಸಾ-9 ರವರಿಗೆ ಹಸ್ತಾಂತರಿಸಿದೆನು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ಎಂ.ಆರ್., ವಕೀಲರಿಂದ**

ದೂರನ್ನು 23 ದಿನಗಳ ತಡವಾಗಿ ದಾಖಲಿಸಲಾಗಿದೆ ಎಂದರೆ ಸರಿ. ದೂರನ್ನು ತಡವಾಗಿ ದಾಖಲಿಸಲು ಕಾರಣವೇನೆಂಬುದರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಎಂದರೆ ಸರಿ. ಸರ್ವೇ ನಂ.14 ಒಟ್ಟು 32 ಎಕರೆ 26 ಗುಂಟೆ ಇದೆ ಎಂದರೆ ಗೊತ್ತಿಲ್ಲ. ಮಹಜರ್ ಸಂದರ್ಭದಲ್ಲಿ ಸರ್ವೇ ನಂ.14 ಪೋಡಿಯಾದ ಬಗ್ಗೆ ವಿಚಾರಣೆ ಮಾಡಿಲ್ಲ. ಸರ್ವೇ ನಂ. 14 ರಲ್ಲಿನ 32 ಎಕರೆ ಜಮೀನಿನ ಬಗ್ಗೆ ತಿಳಿದುಕೊಂಡಿದ್ದೇನೆ. ಸರ್ವೇ ನಂ. 14 ರಲ್ಲಿ ಆರೋಪಿತರಿಗೂ ಮಂಜೂರಾಗಿರುವ ಜಮೀನು ಇರುತ್ತದೆ ಎಂದರೆ ಸರಿ. ರಾಜಕೀಯ ಪ್ರಭಾವದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ಪಡೆದುಕೊಂಡು ಸುಳ್ಳು ಪ್ರಕರಣ ದಾಖಲಿಸಲಾಗಿದರೆ ಎಂದರೆ ಸರಿಯಲ್ಲ. ಪಂಚನಾಮೆಯ ಸಂದರ್ಭದಲ್ಲಿ ಸರ್ವೇಯರ್ ನ್ನು ಕರೆದುಕೊಂಡು ಹೋಗಿಲ್ಲ. ಪಂಚನಾಮೆಯ ಸಂದರ್ಭದಲ್ಲಿ ಭೂಮಿ ಎಷ್ಟು ದಿನಗಳಿಂದ ಉಳುಮೆ ಮಾಡಲಾಗಿತ್ತು ಎಂದು ತಿಳಿದುಕೊಂಡಿಲ್ಲ. ಆರೋಪಿತರು ತಮಗೆ ಮಂಜೂರಾದ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದು ಆಪಾದಿಸಿರುವಂತೆ ಯಾವುದೇ ಜಮೀನನ್ನು ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**